ಹತ್ತಿಸಿಕೊಳ್ಳುತ್ತೇವೆ' ಎಂದನು ಕೃಷ್ಣ.

ಭಯದಿಂದ ಡ್ರೈವರ್ ಕಂಗಾಲಾಗಿ 'ನೀವು ಪೊಲೀಸರಾ?' ಎಂದು ಕೇಳಿದನು.

'ಇಲ್ಲ ಮದುವೆ ಸಂಬಂಧಕ್ಕೋಸ್ಕರ ಆಟೋ ಸ್ಟ್ಯಾಂಡ್ಸ್ ಸುತ್ತುತ್ತಿದ್ದೇವೆ' ಎಂದು ತನ್ನ ಐ.ಡಿ. ಕಾರ್ಡ್ ತೋರಿಸಿದನು.

'ಮನೆಗೆ ವ್ಯಾನ್ ಯಾಕೆ ಬಿಡಿ ಸರ್, ಈಗಲೇ ತೋರಿಸುತ್ತೇನೆ' ಎಂದನು ಡ್ರೈವರ್.

ಆಟೋದಲ್ಲಿ ಹೋಗುತ್ತಿರುವಾಗ ' ನಿಮ್ಮದು ಆ ಸ್ಟೇಷನ್ನಾ' ಎಂದು ಇಂಗ್ಲೀಷ್‌ನಲ್ಲಿ ಕೇಳಿದಳು.

'ನೋ. ಕಮ್ಯಾಂಡೋ ಅಂತ ಮೊದಲೇ ಹೇಳಿದ್ದೆನಲ್ಲ? ಮರೆತು ಬಿಟ್ಟಿರಾ? ಅಥವಾ ಕಮ್ಯಾಂಡೋ ಆದವನಿಗೆ ಈ ಇನ್ವೆಷ್ಟಿಗೇಷನ್ ಎಲ್ಲ ಏಕೆ ಅಂದು ಕೊಂಡಿರಾ?'

'ಊಹೂಂ, ಪೊಲೀಸ್ ಸ್ಟೇಷನ್ ಅಂದಾಗ ಸಂದೇಹ ಬಂತು'

'ಅಷ್ಟು ಮಾತ್ರ ಬುದ್ಧಿ ಬೇಕಲ್ಲರೀ.... ನಿಜಕ್ಕೂ ಬೋರಬಂಡದಲ್ಲಿ ಪೊಲೀಸ್ ಸ್ಟೇಷನ್ ಇಲ್ಲ'

ಅವಳು ಕಣ್ಣರಳಿಸಿ ಮೆಚ್ಚಿಗೆಯಿಂದ ಅವನ ಕಡೆ ನೋಡಿದಳು. ಚೂಪು ಮೂಗು, ಆಟೋದಿಂದ ಒಳಗೆ ಬೀಸಿ ಬರುತ್ತಿರುವ ಗಾಳಿಗೆ ಹಣೆಯ ಮೇಲೆ ಅಲುಗಾಡುವ ಗುಂಗುರು ಕೂದಲು..... ಅವಳಿಗೇಕೋ ಅವನ ಸಹಾಯದಿಂದ ಅಪ್ಪ ಸಿಗುತ್ತಾರೆ ಅನಿಸಿತು. ಅವನಿರದಿದ್ದರೆ ಈ ಪ್ರಯತ್ನ ಮುಂದಕ್ಕೆ ಸಾಗುತ್ತಿರಲಿಲ್ಲ.

ಅವಳ ಯೋಚನೆ ಹೀಗಿರುವಾಗ, ಅವನ ಸ್ಥಿತಿ ಮಾತ್ರ ಬೇರೆಯಾಗಿತ್ತು.

ಆಟೋದಲ್ಲಿ ಅವಳ ಪಕ್ಕದಲ್ಲಿ ಕುಳಿತಿರುವುದು ಸ್ವಲ್ಪ ತೊಂದರೆ ಎನಿಸಿದರೂ ಸ್ವಲ್ಪ ತಳಮಳಕ್ಕೂ ಕಾರಣವಾಗಿತ್ತು. ಆಟೋ ಅಲುಗಾಟಕ್ಕೆ ಅವಳ ಮೊಳಕಾಲು ಸೋಕುತ್ತಿತ್ತು.

ಅಷ್ಟರಲ್ಲಿ ಆಟೋ ನಿಂತಿತು. 'ಅದೇ ಮನೆ ಸರ್' ಎಂದನು ಡ್ರೈವರ್ ನಮ್ರತೆಯಿಂದ.

ಇಬ್ಬರೂ ಕಡೆ ನೋಡಿದರು. ಬಾಗಿಲಿಗೆ ಬೀಗ ಹಾಕಿತ್ತು.

'ಆ ಮನೆಯಿಂದ ಒಬ್ಬ ಹುಡುಗಿನ ಜೊತೆ ಹೊರಗೆ ಬಂದನು. ಸುಲ್ತಾನ್ ಬಜಾರ್‌ನಲ್ಲಿ ಹುಡುಗನನ್ನು ಇಳಿಸಿ ಮತ್ತೆ ನಮ್ಮ ಸ್ಟ್ಯಾಂಡ್‌ಗೆ ಬಂದು ಇಳಿದು ಹೋದನು'.

'ಕೇವಲ ಆ ಹುಡುಗನನ್ನು ಭೇಟಿಯಾಗುವುದಕ್ಕೆ ಆವತ್ತು ಇಲ್ಲಿಗೆ ಬಂದನೇ?' ಎಂದಳು.

'ಆ ಹುಡುಗನನ್ನೇ ಬ್ಲಾಸ್ಟ್‌ಗೆ ಬಳಸಿಕೊಂಡಿರಬಹುದಲ್ಲ? ಅವನು ಹೇಗೂ ಲೋಕಲ್ ಮನುಷ್ಯನೇ' ಎಂದನು ಕೃಷ್ಣಇಂಗ್ಲಿಷ್‌ನಲ್ಲಿ.

ಕಲ್ಯಾಣಿ ಡ್ರೈವರ್ ಕಡೆ ತಿರುಗಿ 'ಆಟೋ ಹತ್ತಿರ ಮೇಲೆ ಅವರು ಏನು ಮಾತಾಡಿಕೊಂಡರು?' ಎಂದು ಕೇಳಿದಳು.

'ಆ ಭಾಷೆ ನನಗರ್ಥವಾಗಲಿಲ್ಲ ಮೇಡಂ'

ಅಷ್ಟರಲ್ಲಿ ಕೃಷ್ಣ 'ಅವರ ಮಾತಿನಲ್ಲಿ ಹಿಂದಿ ಪದಗಳೂ ಇದ್ದವೇನು?' ಎಂದು ಕೇಳಿದನು.

'ಇದ್ದವು ಸರ್'

'ಹಾಗಾದರೆ ಅದು ಕೋಶುರ್, ಕಾಶ್ಮೀರಿ ಭಾಷೆ' ಎಂದನು ಕೃಷ್ಣ. ಏನೂ ಅರ್ಥವಾಗದವಳ ಹಾಗೆ ಅವನ ಕಡೆ ನೋಡಿದಳು ಕಲ್ಯಾಣಿ.

ಕಾಶ್ಮೀರ್‌ನಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿದ್ದೇನೆ. ಆಜಾದ್ ಕಾಶ್ಮೀರ್‌ನಲ್ಲಿ ಅದನ್ನು ಹೆಚ್ಚಾಗಿ ಬಳಸುತ್ತಾರೆ' ಎಂದು ವಿವರಿಸಿದನು.

'ನೀವು ಭಾರತದವರಾಗಿದ್ದು, ಸರ್ಕಾರಿ ಸೇವೆಯಲ್ಲಿದ್ದು ಆ ಪ್ರದೇಶವನ್ನು ಆಜಾದ್ ಕಾಶ್ಮೀರ್ ಎಂದಿದ್ದು ತಪ್ಪು. ಅದು ಪಾಕ್ ಆಕ್ರಮಿತ ಕಾಶ್ಮೀರ್' ಎಂದಳು.

'ಸರಿ, ಅದು ಹಾಗಿರಲಿ ಬಿಡಿ. ಈ ಆಟೋ ಡ್ರೈವರ್‌ನಿಂದ ನಮಗೊಂದು ಸಂತೋಷದ ವಿಷಯ ತಿಳಿಯಿತು. ಆ ಹುಡುಗನೂ ಕಾಶ್ಮೀರದವನೇ'

'ನಾಳೆಯೇ ಆ ಮನೆಯವರ ವಿಷಯ ತಿಳಿದು ಕೊಳ್ಳುತ್ತೇನೆ'

ಅಷ್ಟರಲ್ಲಿ ಆಟೋ ಸ್ಟಾರ್ಟ್ ಮಾಡುತ್ತ 'ಅದೇ ದಿನ ಆ ಮನೆಯಲ್ಲಿ ಒಂದು ಕೊಲೆ ಆಯಿತು ಸಾರ್' ಎಂದನು ಡ್ರೈವರ್.

ಊಹಿಸದೆ ಈ ಸುದ್ದಿ ಕೇಳಿ ಇಬ್ಬರೂ ಪರಸ್ಪರ ಮುಖ ನೋಡಿಕೊಂಡರು. ಪೊಲೀಸ್ ಪರಿಶೋಧನೆಯಲ್ಲಿ ತಾನು ಭಾಗವಾದ ಫೀಲಿಂಗ್‌ನೊಂದಿಗೆ 'ಆ ದಿನ ಮಧ್ಯಾಹ್ನ ಮನೆಯಲ್ಲಿ ಒಬ್ಬಳನ್ನು ಯಾರೋ ಸಾಯಿಸಿದರು. ಆ ಸುದ್ದಿ ಪೇಪರ್‌ನಲ್ಲಿ ಮರುದಿನ ಬಂದಿತ್ತು' ಎಂದನು ಡ್ರೈವರ್.

ಮಾರನೆಯ ದಿನ ಕೃಷ್ಣ ಎಲ್ಲ ವಿವರಗಳನ್ನು ಸಂಗ್ರಹಿಸಿದನು.

'ಆ ಮನೆಯಲ್ಲಿ ಒಬ್ಬ ಬ್ಯಾಂಕ್ ಆಫೀಸರ್‌ನದು. ಅವನ ಹೆಂಡತಿ ಸಿಂಫೋಮ್ಯಾನಿಯಾಕ್. ಗಂಡ ಟೂರ್ ಹೋದಾಗಲೆಲ್ಲ ತನ್ನ ಬಾಯ್‌ಫ್ರೆಂಡ್ಸ್‌ನ ಕರೆಸಿಕೊಂಡು ಎಂಜಾಯ್ ಮಾಡುತ್ತಿದ್ದಳು. ಆ ದಿನ ಅವಳ ಗಂಡ ಟೂರ್‌ನಲ್ಲಿದ್ದುದಕ್ಕೆ ಎಲಿಬಿ ಇದೆ. ಕೊಲೆ ಮಧ್ಯಾಹ್ನ ನಡೆಯಿತಂತೆ.'

'ಅಂದರೆ.... ಮಿಝ್ರಾಡಿನ್ ಅಲ್ಲಿಗೆ ಹೋದ ಸಮಯದಲ್ಲಿ ನಡೆದಿರಬಹುದು ಅಥವಾ ಅವನು ಆ ಹುಡುಗರ ಜೊತೆ ಹೋದ ಮೇಲೆ ನಡೆದಿದೆ. ಆ ವಿವರಗಳನ್ನು ತಿಳಿಯಬೇಕೆಂದರೆ, ಮಿಝ್ರಾಡಿನ್‌ಗೂ ಅವಳಿಗೂ ಯಾವ ಸಂಬಂಧ ಎಂದು ತಿಳಿದುಕೊಳ್ಳಬೇಕು. ಅವನು ಅವಳ ಮನೆಗೇಕೆ ಹೋದ? ಆ ಹುಡುಗನಿಗಾಹಿಯೇ? ಬಾಂಬ್ ಬ್ಲಾಸ್ಟ್ ಮಾಡಿದ ಕಾಶ್ಮೀರೀ ಯುವಕ. ಇವನೇನಾ?' ಎಂದು ಕೆಲಕ್ಷಣ ಯೋಚಿಸಿ 'ಅವಳ ಫೋನ್ ನಂಬರ್‌ಗಳ ಮೂಲಕ ಬಾಯ್ ಫ್ರೆಂಡ್ಸ್ ಲಿಸ್ಟ್ ಸಂಪಾದಿಸಬೇಕು. ಅವರ ಫೋಟೋಗಳನ್ನು ಆಟೋ ಡ್ರೈವರ್‌ಗೆ ತೋರಿಸಿದರೆ ಅವನು ಗುರುತು ಹಿಡಿಯಬಹುದು. ಇದು ದೊಡ್ಡ ಪ್ರೋಸೆಸ್. ಆದರೆ ನಿಮ್ಮ ಇನ್‌ಫ್ಲುಯೆನ್ಸ್ ಬಳಸಿ ಒಂದೆರಡು ದಿನದಲ್ಲಿ ಆಗುವ ಹಾಗೆ ನೋಡಬೇಕು' ಎಂದಳು ಕಲ್ಯಾಣಿ.

ಅವಳ ಕಡೆ ಕಣ್ಣರಳಿಸಿ ನೋಡಿದನು ಕೃಷ್ಣ.

'ಏಕೆ ಹಾಗೆ ನೋಡ್ತಿದ್ದೀರಿ?'

'ನೀವು ಐಐಟಿಗೆ ಸೇರದೆ ಪೊಲೀಸ್ ಡಿಪಾರ್ಟ್‌ಮೆಂಟ್‌ಗೆ ಬಂದಿದ್ದರೆ ಚೆನ್ನಾಗಿತ್ತು'

'ಇಷ್ಟು ಸಣ್ಣ ವಿಷಯವನ್ನು ಯಾರು ಬೇಕಾದರೂ ಹೇಳುತ್ತಾರೆ ಬಿಡಿ'

'ನೀವೇನೂ ತಿಳಿಯದಿದ್ದರೆ ಒಂದು ಮಾತು ಕೇಳಲೇ?'

'ಹೇಳಿ'

'ಸುಂದರ ಹುಡುಗಿಯರಿಗೆ ಬುದ್ಧಿ ಇರುವುದಿಲ್ಲ ಎಂದೂ, ಬುದ್ಧಿವಂತ ಹೆಣ್ಣು ಸುಂದರವಾಗಿರುವುದಿಲ್ಲ ಎಂದೂ ನಾನು ತಿಳಿದಿದ್ದೆ, ಈ ಅಭಿಪ್ರಾಯ ತಪ್ಪು ಎಂದು ಈಗ ಗೊತ್ತಾಯಿತು'

'ನನಗೆ ಲೈನ್ ಹೊಡೆಯುವುದಕ್ಕೆ ಟ್ರೈ ಮಾಡಬೇಡಿ, ನಿಮ್ಮ ಟೈಂ ವ್ಯರ್ಥ ಆಗುತ್ತದೆ' ಎಂದಳು.

ಅವನ ಮುಖ ಕಪ್ಪಿಟ್ಟಿತು. ಕೆಲ ಕ್ಷಣ ಮೌನವಾಗಿದ್ದನು. ನಂತರ, 'ನೀವು ಆ ರೀತಿ ಅರ್ಥ ಮಾಡಿಕೊಂಡರೆ ನಾನೇನೂ ಮಾಡಲಾರೆ. ನಾನೊಬ್ಬ ಕಮಾಂಡೋ. ಪಿಸ್ತೂಲ್‌ಗಳು, ಶೂಟ್‌ಔಟ್, ಕೈದಿಗಳಿಗೆ ಟಾರ್ಚರ್ ಕೊಟ್ಟು ರಹಸ್ಯಗಳನ್ನು ತಿಳಿದುಕೊಳ್ಳುವುದು, ಇಷ್ಟ ಬಿಟ್ಟರೆ ದೊಡ್ಡದಾಗಿ ಬುದ್ಧಿ ಉಪಯೋಗಿಸಬೇಕಾದ ಕೆಲಸವಲ್ಲ ನನ್ನದು. ನಾನು ಬಹಳ ಬಿದ್ಧಿವಂತನೂ ಅಲ್ಲ. ಮಾಂಸ ಬೆಳೆದಷ್ಟು ಮೆದುಳು ಬೆಳೆದಿಲ್ಲ. ಆದರೆ ನಿಮ್ಮನ್ನು ಕಂಡಾಗ 'ಒಳ್ಳೆ' ಭಾವನೆ ಬಂತು. 'ಒಳ್ಳೇ' ಅಂದರೇನು ಅಂತ ವಿವರಿಸಿ ಹೇಳಲಾರೆ. ಮನೆಯ ಒಂದು ಮೂಲೆಯಲ್ಲಿ ಕುಳಿತು ತಲೆ ಚಚ್ಚಿಕೊಳ್ಳುತ್ತ ಮಾಡಿದ ಲೆಕ್ಕವನ್ನು ಅಪ್ಪ ಐದೇ ನಿಮಿಷದಲ್ಲಿ ಮಾಡಿದಾಗ ಆಗುವಂತಹ ಗೌರವ ಮಿಶ್ರಿತ ಭಾವನೆ... ಬೆಳಗಿನ ಜಾವ ಎದ್ದು ಮನೆ ಮುಂದೆ ರಂಗೋಲಿ ಹಾಕುತ್ತಿರುವ ಅಮ್ಮನ ಹೆಗಲ ಮೇಲೆ ಹಿಂದಿನಿಂದ ಕೈಗಳನ್ನು ಹಾಕಿ 'ರಂಗೋಲಿ ತುಂಬ ಚೆನ್ನಾಗಿದೇಮ್ಮಾ' ಎನ್ನುವುದು ಸಿನಿಮಾಗೆ ದುಡ್ಡು ಬೇಕೆಂದು ಲೈನ್ ಹಾಕುವುದಿಲ್ಲ' ಎಂದನು.

ಕಸಿವಿಸಿಗೊಳಿಸುವ ಮೌನ ಅಲ್ಲಿ ಆವರಿಸಿತು. ಅವಳು ಆಗ ನೊಂದುಕೊಳ್ಳುತ್ತ 'ಸರ್, ನನ್ನ ಉದ್ದೇಶ ಅದಲ್ಲ' ಎಂದಳು. ಆದರೆ ಅವಳ ವಿವರಣೆ ಅವಳಿಗೇ ತೃಪ್ತಿಕರವೆನಿಸಲಿಲ್ಲ.

'ನಾನು ಹೋಗಿ ಬರುತ್ತೇನೆ. ಅವಳ ಫ್ರೆಂಡ್ಸ್ ಫೋಟೋಗಳನ್ನು ಆದಷ್ಟು ಬೇಗ ತರಿಸುತ್ತೇನೆ' ಎನ್ನುತ್ತಾ ಮೇಲೆದ್ದನು.

ಕಲ್ಯಾಣಿ ಅವನ ಕೈಹಿಡಿದು 'ನಿಜವಾಗಲೂ ಸಾರಿ ರೀ... ಅನಗತ್ಯವಾಗಿ ಹಾಗೆ ಮಾತಾಡಿಬಿಟ್ಟೆ' ಎಂದಳು.

'ಪರವಾಗಿಲ್ಲ, ತಪ್ಪು ನನ್ನದೇ ಆಗಿತ್ತು'

'ನೀವಷ್ಟು ಸೀರಿಯಸ್ಸಾಗಿದ್ದರೆ ಚೆನ್ನಾಗಿರುವುದಿಲ್ಲ, ಎಂದಿನ ಹಾಗೆ ನಗುತ್ತಾ ಇರಿ ಪ್ಲೀಸ್' ಎಂದಳು.

'ನನ್ನ ನಗುವಿಗಿಂತ ನಿಮ್ಮ ನಗು ಸುಂದರವಾಗಿದೆ' ಎನ್ನಬೇಕು ಅನಿಸಿತು. ಆದರೆ' ಮತ್ತೆ ಲೈನ್ ಹಾಕ್ತಿದ್ದೀಯಾ' ಎಂದವಳು ಹೇಳಬಹುದು ಅನಿಸಿ ಹೆದರಿದನು.

(ಸಶೇಷ)